ದಿನಾಂಕ **:** 17.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಯ ಪರವಾಗಿ ಶ್ರೀ** ಕೆ.ವಿ.ಎನ್. **ವಕೀಲರಿಂದ :**

*ನಾನು ನಿವೇಶನ ಸಂಖ್ಯೆ **15** ಕ್ಕೆ ಈ ದಾವೆ ಹಾಕಿದ್ದೇನೆ. ಅದು ನಿವೇಶನದ ಸಂಖ್ಯೆ. ಅದರ ಚೆಕ್ಕುಬಂದಿ ಪೂ: ರಸ್ತೆ, ಪ : ಕನ್ಸರ್ವೆನ್ಸಿ ಲೈನ್, ಉ : ಖಾಲಿ ನಿವೇಶನ ಮತ್ತು ಅದು ಯಾರಿಗೆ ಸೇರಿದು ಎಂದು ನನಗೆ ಗೊತ್ತಿಲ್ಲ ಮತ್ತು ದ : ಸೈಟು ನಂ **14** ಅದು ನನ್ನ ಸ್ವಂತ ಮನೆ, ಅದು ನನ್ನ ತಾಯಿಯ ಹೆಸರಿನಲ್ಲಿದೆ. ನನ್ನ ತಾಯಿಗೆ ಪಾರ್ಶ್ವವಾಯ ಆದ ಕಾರಣ ಅವರು ನ್ಯಾಯಾಲಯಕ್ಕೆ ಬಂದಿಲ್ಲ. ಆ ಬಗ್ಗೆ ದಾಖಲಾತಿ ನೀಡಿರುತ್ತೇನೆ. ಆ ಬಗ್ಗೆ ದಾಖಲಾತಿ ನೀಡಿಲ್ಲ ಎಂದರೆ ಸರಿಯಲ್ಲ . ಅವರು ಆರೋಗ್ಯವಾಗಿದ್ದು ಕಚೇರಿಗೆ ಹೋಗುತ್ತಿದ್ದಾರೆಂದರೆ ಸರಿಯಲ್ಲ. ಅವರು ಕಚೇರಿಗೆ ಹೋಗುತ್ತಿದ್ದಾರೆ. ಅವರಿಗೆ ಯಾವುದೇ ಅನಾರೋಗ್ಯ ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಮೇಲೆ ಹೇಳಿದ ಚೆಕ್ಕುಬಂದಿ ತೋರಿಸಲು ದಾಖಲಾತಿ ನೀಡಿದ್ದೇನೆ, ಅದು ನೋಂದಾಯಿತ ದಾಖಲಾತಿ. ಸದರಿ ಚೆಕ್ಕುಬಂದಿಗೆ ದಾಖಲಾತಿ ನೀಡಿಲ್ಲ ಎಂದರೆ ಸರಿಯಲ್ಲ . ದಾವಾಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ.*

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ *ಗ* ಣಕೀಕರಿಸಲಾಯಿತು).

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು *ಬಿ.ಕೆ.*)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ